ಓ.ಎಸ್.ನಂ.250/2015

ಡಿ .ಡಬ್ಲ್ಯೂ- 1

<u>ದಿನಾಂಕ: **21-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**</u>

<u>**ಪಾಟೀ ಸವಾಲು:** ವಾದಿ ಪರ **ವಕೀಲರಿಂದ**</u>

ಸದರಿ ದಾವೆ ನಡೆಯುತ್ತಿರುವಾಗ ನಾನು ಜಿಲ್ಲಾಧಿಕಾರಿಗಳಿಗೆ ಅರ್ಜಿ ಸಲ್ಲಿಸಿರುತ್ತೇನೆಂದರೆ ಸರಿ. ಅಜ್ಜಿ ಹೆಸರಿನಲ್ಲಿ ಇದ್ದ ಮನೆ ಹಾಗೂ ಜಮೀನನ್ನು ನಾಗರಾಜ್ ರವರು ಮಗ ಎಂದು ಮಾಡಿಕೊಂಡಿದ್ದ ಖಾತೆಯನ್ನು ರದ್ದು ಮಾಡಲು ಅರ್ಜಿಯನ್ನು ಸಲ್ಲಿಸಿರುತ್ತೇನೆ. ಜಿಲ್ಲಾಧಿಕಾರಿಗಳಿಗೆ ಆಧಾರ್ ಕಾರ್ಡ, ರೇಷನ್ ಕಾರ್ಡ ಹಾಗೂ ನಾಗರಾಜ್ ರವರು ಅವರ ಹೆಸರಿಗೆ ಮಾಡಿಕೊಂಡ ಖಾತೆ, ಎಲ್ಲಾ ದಾಖಲಾತಿಗಳನ್ನು ನೀಡಿರುತ್ತೇನೆ. ಮನೆ, ಜಮೀನು ಭದ್ರಮ್ಮನವರ ಹೆಸರಿನಲ್ಲಿದ್ದು, ಅವರ ಹೆಸರಿಗೆ ಬಂದ ದಾಖಲಾತಿಗಳನ್ನು ಜಿಲ್ಲಾಧಿಕಾರಿಗಳಿಗೆ ನೀಡಿರುತ್ತೇನೆ. ಭದ್ರಮ್ಮನವರಿಗೆ ಮನೆ ಹಾಗೂ ಜಮೀನು 2001-02 ನೇ ವರ್ಷದಲ್ಲಿ ಮಂಜೂರು ಆಗಿರುತ್ತದೆ. ಜಿಲ್ಲಾಧಿಕಾರಿಗಳು ನನ್ನ ಅಣ್ಣನಿಗೆ ನೋಟಿಸ್ ನೀಡಿರುವ ಬಗ್ಗೆ ನನಗೆ ಮಾಹಿತಿ ಇಲ್ಲ.

ಜಿಲ್ಲಾಧಿಕಾರಿಗಳು ನಿಮ್ಮ ಅರ್ಜಿಯನ್ನು ಪುರಸ್ಕರಿಸಿ ನಿಮ್ಮನ್ನು ಕರೆಸಿ ವಿಚಾರಣೆ ಮಾಡಿರುತ್ತಾರೆಂದರೆ ಸಾಕ್ಷಿ ವಿಚಾರಣೆ ಮಾಡಿರುವುದಿಲ್ಲ ಎಂದು ನುಡಿದಿರುತ್ತಾರೆ. ಸಾಕ್ಷಿ ಮುಂದುವರಿದು ಆರ್ ಐ ಗೆ ಹೋಗಿರುತ್ತದೆ ಎಂದು ತಿಳಿಸಿರುತ್ತಾರೆಂದು ನುಡಿದಿರುತ್ತಾರೆ. ಆರ್ ಐ ರವರು ಅವರಿಗೆ ಹುಷಾರಿಲ್ಲ ಎಂದು ನಮ್ಮನ್ನು ಕರೆಸಿರುವುದಿಲ್ಲ. ಮೇಲೆ ತಿಳಿಸಿದ ಅರ್ಜಿಯ ಮೇರೆಗೆ ವಿಲೇಜ್‌ಅಕೌಂಟೆಟ್ ವಿಚಾರಣೆ ಮಾಡಿ ನಿಮಗೆ ತಿಳಿಸಿರುತ್ತಾರೆಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ಜಿಲ್ಲಾಧಿಕಾರಿಗಳು ವಿಚಾರಣೆ ಮಾಡಿ ತಿಳಿಸುತ್ತೇವೆಂದು ಹೇಳಿರುತ್ತಾರೆ, ಆದರೆ ಇನ್ನು ತಿಳಿಸಿಲ್ಲ ಎಂದು ನುಡಿದಿರುತ್ತಾರೆ. ನಿಡಿ-27 ನ್ನು ಖಾತೆ ಬದಲಾವಣೆ ಮಾಡಿಕೊಂಡಿರುವ ವಿಚಾರವಾಗಿ ಪೊಲೀಸರಿಗೆ ದೂರನ್ನು ಸಲ್ಲಿಸಿರುತ್ತೇನೆ. ಪೊಲೀಸರು ನಮ್ಮಗಳನ್ನು ಕರೆಸಿದ್ದು, ಅವರ ಮುಂದೆ ನಾಗರಾಜ್ ರಾಜಿ ಆಗುತ್ತೇನೆಂದು

ತಿಳಿಸಿರುತ್ತಾರೆಂದು ನುಡಿದಿರುತ್ತಾರೆ. ಅದರ ಬಗ್ಗೆ ಪೊಲೀಸ್ ಅಧಿಕಾರಿಗಳು ಹಿಂಬರಹವನ್ನು ನೀಡಿರುತ್ತಾರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ನಿಪಿ-26, 27 ದಾಖಲಾತಿಯನ್ನು ನಾಗರಾಜ್ ರವರನ್ನು ಹೆದರಿಸಿ ದಾವ ಆಸ್ತಿಯನ್ನು ಪಡೆಯಲು ಸಲ್ಲಿಸಿರುತ್ತಿರಾ ಎಂದರೆ ಸರಿಯಲ್ಲ. ದಾವ ಸ್ವತ್ತು ಭದ್ರಮ್ಮನವರಿಗೆ ಮಂಜೂರಾದ ಸ್ವತ್ತಾಗಿರುವುದಿಲ್ಲ, ನಾಗರಾಜ್ ರವರು ಸ್ವಯಾರ್ಜಿತವಾಗಿ ಪಡೆದ ಸ್ವತ್ತಾಗಿರುತ್ತದೆ, ಅದರಲ್ಲಿ ಲಾಭ ಪಡೆಯಲು ಸುಳ್ಳು ದಾವೆಯನ್ನು ಸಲ್ಲಿಸಿರುತ್ತಿರಾ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ. ಕೇ. ಸ. ಇ. ಎ. ಒ.**

ಸಹಿ/-

1 ನೇ **ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**